ಶ್ರೀ ಆರ್. ದಿನೇಶ್ ಗುಂಡೂರಾವ್ : ಮುಖ್ಯಮಂತ್ರಿಗಳು ಮಾತನಾಡುತ್ತಿದ್ದಾರೆ. ವೈಯಕ್ತಿಕ ವಿಚಾರಗಳು ಇಲ್ಲಿ ಬೇಕಾಗಿಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಅದು ಆಗಿದೆ. ತರುತ್ತೇನೆ. ಆ document ಇಡುತ್ತೇನೆ. KIADBಗೆ PWD ಯಿಂದ powers ಕೊಡುತ್ತಾರೆ. ಅದಾಗಿದೆ. Records ನಲ್ಲೇ ಇದೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಯಾರು ಕೊಡುತ್ತಾರೆ ಅಂತ ಅನ್ನುವುದಾದರೂ ಬರಬೇಕಲ್ಲಾ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಇದೆಲ್ಲಾ ಚರ್ಚೆಯಾದ ಮೇಲೆ, ಸಂಪೂರ್ಣ ಈ ಒಂದು project ಏನಿದೆ ಇದನ್ನು ಸಂಪೂರ್ಣವಾಗಿ ನಿಮ್ಮ custody ಗೆ ಕೊಡುತ್ತೇನೆ. ಆಮೇಲೆ, ಏನೇನು ಮಾಡಬೇಕು ಎಂದು final ಆಗಿ ಬರೋಣವಂತೆ. ಈಗ ನಿಲ್ಲಿಸಬಹುದು ಅಧ್ಯಕ್ಷರೆ. ಏಕೆಂದರೆ, ಅದು ಅಲ್ಲಿಗೇ ಒಂದು part. Next ಧರ್ಮಸಿಂಗ್‌ರವರು ಬರುತ್ತಾರೆ.

ಅಧ್ಯಕ್ಷರು : ಇದನ್ನು after lunch ತೆಗೆದುಕೊಳ್ಳೋಣ. ಸದನವನ್ನು 3.00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 2 ಗಂಟೆ 2 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು 3 ಗಂಟೆ 17 ನಿಮಿಷಕ್ಕೆ ಸಮಾವೇಶಗೊಂಡಿತು)

(ಸನ್ಮಾನ್ಯ ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

2. ಸಂತಾಪ ಸೂಚನೆ

ವಿಷಯ : ಕಾಗಿನೆಲೆ ಮಹಾಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ಶ್ರೀ ಶ್ರೀ ಬೀರೇಂದ್ರ ಕೇಶವ ತಾರಕಾನಂದ ಪುರಿ ಅವರ ನಿಧನದ ಬಗ್ಗೆ.

ಅಧ್ಯಕ್ಷರು : ಕಾಗಿನೆಲೆ ಮಹಾಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ಶ್ರೀ ಶ್ರೀ ಬೀರೇಂದ್ರ ಕೇಶವ ತಾರಕಾನಂದ ಪುರಿ ಅವರು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾಧದಿಂದ ತಿಳಿಸಬಯಸುತ್ತೇನೆ.

ನಂಜನಗೂಡಿನವರಾದ ಸ್ವಾಮೀಜಿಗಳು ಎಂ.ಎ. ತತ್ವಶಾಸ್ತ್ರದ ಪದವೀಧರರು ಹಾಗೂ ಸಂಸ್ಕೃತ ಭಾಷೆಯ ವಿದ್ವಾಂಸರು ಕನಕ ಸ್ಫೂರ್ತಿ ಮಾಸ ಪತ್ರಿಕೆಯ ಸಂಪಾದಕರಾಗಿ ಕನಕಗುರು ತತ್ವ ಸಿದ್ಧಾಂತವನ್ನು ನಾಡಿನ ಸಮಸ್ತರಿಗೆ ತಲುಪಿಸುವ ಕಾರ್ಯನಿರ್ವಹಿಸಿದ ಸ್ವಾಮಿಗಳು 1992ರಲ್ಲಿ ಕಾಗಿನೆಲೆಯಲ್ಲಿರುವ ಮಹಾಸಂಸ್ಥಾನದ

ಪೀಠಾಧ್ಯಕ್ಷರಾಗಿ ಹಿಂದುಳಿದ ವರ್ಗಗಳ ಅದರಲ್ಲೂ ಪ್ರಮುಖವಾಗಿ ಕುರುಬ ಜನಾಂಗದ ಏಳಿಗೆಗಾಗಿ ಶ್ರಮಿಸಿರುತ್ತಾರೆ. ಸ್ವಾಮಿಜಿಯವರು ದಿ ಫಿಲಾಸಫಿ ಆಫ್ ಲೈಫ್ ಎನ್ನುವ ಗ್ರಂಥವನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಬರೆದಿರುತ್ತಾರೆ. ಸ್ವಾಮಿಜಿಗಳು ಕನಕ ಮಹಾಸಂಸ್ಥಾನದ ಗುರುಪೀಠದ ಪ್ರಥಮ ಜಗದ್ಗುರುಗಳಾಗಿ ಸಮಾಜದ ಸೇವೆಯನ್ನು ಮಾಡಿರುತ್ತಾರೆ.

ಶ್ರೀ ಶ್ರೀ ಶ್ರೀ ಬೀರೇಂದ್ರ ಕೇಶವ ತಾರಕಾನಂದ ಪುರಿ ಸ್ವಾಮೀಜಿಗಳು ದಿನಾಂಕ : 6–7–2006ರಂದು ನಿಧನ ಹೊಂದಿದರು. ಯಾರಾದರೂ ಮಾತನಾಡುವುದಿದ್ದರೆ ಮಾತನಾಡಬಹುದು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಕಾಗಿನೆಲೆ ಮಹಾಸಂಸ್ಥಾನದ ಪೀಠಾಧ್ಯಕ್ಷರಾದಂತಹ ಶ್ರೀ ಶ್ರೀ ಶ್ರೀ ಬೀರೇಂದ್ರ ಕೇಶವ ತಾರಕಾನಂದ ಪುರಿ ಸ್ವಾಮಿಜಿಯವರು ನಿಧನ ಸುದ್ದಿ ನಮಗೆಲ್ಲರಿಗೂ ಆಘಾತ ತಂದಿರುತ್ತದೆ. ಅವರು ಒಬ್ಬ ಹಿಂದುಳಿದ ಜನಾಂಗದ ಅದರಲ್ಲೂ ಕುರುಬ ಜನಾಂಗಕ್ಕೆ ಸೇರಿದಂತಹ ಒಂದು ಸಮಾಜದ ಏಳಿಗೆಗಾಗಿ ಮಾರ್ಗದರ್ಶಕರಾಗಿ ದುಡಿಯುವುದರ ಜೊತೆಗೆ ಹಿಂದುಳಿದ ಜನಾಂಗದ ಏಳಿಗೆಗಾಗಿ ಶ್ರಮವನ್ನು ವಹಿಸಿದ್ದಾರೆ. ನಂಜನಗೂಡಿನಂತಹ ಒಂದು ಸಣ್ಣ ಗ್ರಾಮದಲ್ಲಿ ಜನಿಸಿ ಎಂಎಂ ಪದವೀಧರರಾಗಿ ಫೀಲಾಸಫಿ ಆಫ್ ಲೈಫ್ ಎನ್ನುವ ಇಂಗ್ಲೀಷ್ ಗ್ರಂಥವನ್ನು ಕನ್ನಡ ಮತ್ತು ಆಂಗ್ಲಭಾಷೆಯಲ್ಲಿ ಬರೆದಿರುವಂತಹ ಆ ಒಂದು ಗ್ರಂಥದ ಮುಖಾಂತರ ಅವರು ಒಂದು ಜೀವನದ ಯಾವ ರೀತಿಯಾಗಿ ಹೋಗಬೇಕೆನ್ನುವುದರ ಬಗ್ಗೆ ಅವರ ಒಂದು ಮಾರ್ಗದರ್ಶನದಲ್ಲಿದ್ದೇವೆ. ಅದು ನಮಗೆಲ್ಲರಿಗೂ ಅದನ್ನು ಅಳವಡಿಸಿಕೊಳ್ಳುವುದರ ಮುಖಾಂತರ ಇವತ್ತು ಅವರ ಒಂದು ಆಶೀರ್ವಚನ ಅವರ ಸಂದೇಶಗಳು ಏನಿದ್ದಾವೆ ಅದನ್ನು ಪಾಲಿಸುವಂತಹ ಕೆಲಸವನ್ನು ಮಾಡುವುದರ ಜೊತೆಗೆ ಅವರ ಒಂದು ಆತ್ಮಕ್ಕೆ ಶಾಂತಿಯನ್ನು ಕೋರುವುದಕ್ಕೆ ಬಯಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಸಭಾಧ್ಯಕ್ಷರೆ, ಪೂಜ್ಯಸ್ವಾಮೀಜಿಯವರಾದಂತಹ ಬೀರೇಂದ್ರ ಕೇಶವ ತಾರಕನಂದಪುರಿಯವರು ದೈವಾಧೀನರಾದರು ಎಂದು ಕೇಳಿ ನಮಗೆಲ್ಲರಿಗೂ ದೊಡ್ಡ ಆಘಾತವಾಗಿದೆ. ಅವರು ಕೇವಲ ಕನಕ ಪೀಠದ ಮುಖಾಂತರ ಅವರು ಸಮಾಜದಲ್ಲಿ ಅಷ್ಟೇ ಅಲ್ಲ, ನಾಡಿನ ಎಲ್ಲಾ ವರ್ಗದ ಎಲ್ಲಾ ಸಮಾಜದ ಮಾರ್ಗದರ್ಶಕರಾಗಿದ್ದರು. ಇವತ್ತು ಅವರು ನಮ್ಮಲ್ಲಿಲ್ಲ. ಆದರೆ ಅವರು ಮಾಡಿರುವಂತಹ ಕಾರ್ಯ ಅವರು ಮಾಡಿರುವಂತಹ ಸಮಾಜಸೇವೆ ಮತ್ತು ಅವರು ಹಿಂದುಳಿದ ಸಮಾಜದಲ್ಲಿ ಜನಜಾಗೃತಿಯನ್ನು ಏನು ತಂದರು ಅದು

ಯಾವಾಗಲೂ ಇತಿಹಾಸದ ಪುಟದಲ್ಲಿ ಸುವರ್ಣಾಕ್ಷರದಲ್ಲಿ ಇರುತ್ತದೆ. ಈ ಒಂದು ಸಂದರ್ಭದಲ್ಲಿ ನಾನು ಇಷ್ಟು ಹೇಳಬಹುದು, ತಾವು ಏನುಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ, ಅದಕ್ಕೆ ಸಂಪೂರ್ಣವಾದ ಒಪ್ಪಿಗೆಯನ್ನು ಕೊಡುತ್ತಾ, ಅವರ ಆತ್ಮಕ್ಕೆ ಶಾಂತಿಯನ್ನು ದೇವರು ಕೊಡಲಿ, ಅವರು ಏನು ಮಾರ್ಗದರ್ಶನವನ್ನು ಮಾಡಿದ್ದಾರೆ, ಅವರು ಯಾವ ರೀತಿಯಿಂದ ಸಮಾಜದಲ್ಲಿ ಜಾಗೃತಿಯನ್ನುಂಟು ಮಾಡಿದ್ದಾರೆ ಆ ಎಲ್ಲಾ ಅಂಶಗಳು ನಾವು ಅದನ್ನು ಗಮನದಲ್ಲಿಟ್ಟುಕೊಂಡು ಮುಂದೆ ನಡೆಯಬೇಕು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಇದು ಒಂದು ತುಂಬಿಬಾರದ ನಷ್ಟ, ನಮ್ಮ ಮತ್ತು ಅವರ ಬದುಕಿನಲ್ಲಿ ಬಹಳ ವೈವಿಧ್ಯವನ್ನು ಕಂಡಂತವರಾಗಿದ್ದಾರೆ. ನನಗೆ ಅವರು 1978ರಲ್ಲಿ ನಾನು ಮತ್ತು ಅವರು ಟಿಕೇಟ್‌ಗಾಗಿ ಪ್ರಯತ್ನವನ್ನು ಮಾಡಿದೆವು. ಆ ಸಂದರ್ಭದಲ್ಲಿ ಇಬ್ಬರಿಗೂ ಕೂಡ ನಮ್ಮ ನಮಗೆ ಜನತಾ ಪಕ್ಷದಿಂದ ಟಿಕೇಟ್ ಸಿಕ್ಕಿತ್ತು ನಾವಿಬ್ಬರೂ ಕೂಡ ಸೋತಿದ್ದೆವು. ಅವರುಕೂಡ ಅಲ್ಲಿ ತಮ್ಮ ಕ್ಷೇತ್ರದಲ್ಲಿ ಚುನಾವಣೆಯಲ್ಲಿ ಸೋತಿದ್ದರು. ಅವರ ಪೂರ್ವಾಶ್ರಮದಲ್ಲಿ ಆ ತರಹ ಸಾಮಾಜಿಕ ಚಳುವಳಿಯನ್ನು ಮಾಡುವಂತಹ ಒಬ್ಬ ಹರಿಕಾರರಾಗಿದ್ದರು. ನಂತರ ದಿನಮಾನಗಳಲ್ಲಿ ಅವರುಗಳು ಜಗದ್ಗುರುಗಳಾದ ಮೇಲೆ ಆ ಸಮಾಜದ ಕಾಗಿನೆಲೆ ಪ್ರದೇಶವನ್ನು ಅಭಿವೃದ್ಧಿಪಡಿಸುವ ಬಗ್ಗೆ ಅಹೋರಾತ್ರಿ ಹೋರಾಟವನ್ನು ಮಾಡಿದ್ದರು. ಅವರು ಏನು ಸ್ಥಾಪನೆ ಮಾಡಿರುವಂತಹ ಬ್ಯಾಂಕಿನಲ್ಲಿ ಇತ್ತೀಚೆಗೆ ಕೆಲವು ಸುಧಾರಣೆಗಳನ್ನು ತರಬೇಕೆಂದು ನಿರಂತರ ಪ್ರಯತ್ನ ಮಾಡುತ್ತಿದ್ದರು. ಅವರು ಬಹಳ ನಿಷ್ಠೂರವಾದಿಯಾಗಿರುವಂತಹ ಒಬ್ಬ ಜಗದ್ಗುರುಗಳಾಗಿದ್ದರು. ಅದರ ಜೊತೆಗೆ ಕಾಗಿನೆಲೆ ಪ್ರಾಧಿಕಾರವನ್ನು ರಚನೆ ಮಾಡಿ ಕೂಡಲ ಸಂಗಮ ಮಾಡಿದಂತೆ ಅದನ್ನು ನೀವು ಬೆಳೆಸಬೇಕೆಂದು ಆ ಪ್ರಸ್ತಾಪವನ್ನು ಇಟ್ಟಿದ್ದರು. ಅವತ್ತಿನ ನಮ್ಮ ಉಪಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರೂ ಕೂಡ ಬಹಳ ಆಸಕ್ತಿಯನ್ನು ತೆಗೆದುಕೊಂಡಿದ್ದರು. ಇದರ ಬಗ್ಗೆ ಹೇಳಿದ್ದರಿಂದ ನಾವು ಕಾಗೀನೆಲೆ ಅಭಿವೃದ್ಧಿ ಪ್ರಾಧಿಕಾರವನ್ನು ಮಾಡಿ ಅದಕ್ಕೆ ಬಜೆಟ್‌ನಲ್ಲಿ ಅದಕ್ಕಾಗಿ 3 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದು ಕೂಡ ಇದೆ. ಅವರದು ಅದೊಂದು ದೊಡ್ಡ ಕನಸಾಗಿತ್ತು. ಆ ಊರಿನಲ್ಲಿ ಅವರ ಜನಾಂಗದವರು ಇಲ್ಲ, ಆದರೆ ಕಾಗಿನೆಲೆ ಪೀಠ ಕನಕದಾಸರಿಗೆ ಸಂಬಂಧಪಟ್ಟಿದೆ ಅವರು ದಾಸರಾಗುವುದಕ್ಕಿಂತ ಮುಂಚಿತವಾಗಿ ಮುಂಚೆ ಅಲ್ಲಿ ಪಾಳೇಗಾರರಾಗಿದ್ದರು. ಅಲ್ಲಿ ರಾಜರಾಗಿದ್ದರು, ಅವರು ಮತ್ತೆ ಹಂಪೆ ಕ್ಷೇತ್ರದಲ್ಲೆಲ್ಲಾ ಕೂಡ

ತಿರುಗಾಡಿ ಆ ದಾಸಕೂಟದ ಪರಂಪರೆಯನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡಂತಹ ಒಬ್ಬ ನಿಜವಾದಂತಹ ಕಳಕಳಿ ಇರುವಂತಹ ಸಮಾಜಕ್ಕೆ ಸೇವೆಯನ್ನು ಮಾಡುವಂತಹ ಒಬ್ಬ ಸ್ವಾಮಿಗಳಾಗಿದ್ದರು. ನಮ್ಮ ಭಾಗದಲ್ಲಿಯೂ ಕೂಡ ಅನೇಕಬಾರಿ ಬಂದು ಹೋಗಿರುತ್ತಾರೆ. ಅವರ ಇತ್ತೀಚಿನ ದಿನಮಾನಗಳಲ್ಲಿ ಅವರ ಆರೋಗ್ಯ ಚೆನ್ನಾಗಿರಲಿಲ್ಲ. ಆದರೆ ಅವರು ಇಷ್ಟು ಬೇಗನೆ ಇಹವನ್ನು ತೊರೆಯುತ್ತಾರೆಂದು ಅಂತ ಅಭಿಪ್ರಾಯ ಅಥವಾ ತಿಳುವಳಿಕೆ ಅವರಿಗೆ ಗೊತ್ತಿದ್ದರೂ ಕೂಡ ನಮಗೆ ಇರಲಿಲ್ಲ. ಇದು ನಮ್ಮ ನಾಡಿಗೆ ತುಂಬಿಬಾರದಂತಹ ನಷ್ಟವಾಗಿದೆ. ತಾವು ಏನು ಸಂತಾಪ ಸೂಚನೆಯನ್ನು ತಂದಿದ್ದೀರಿ, ಸಭಾನಾಯಕರು ಮತ್ತು ವಿರೋಧಪಕ್ಷದ ನಾಯಕರು ಅದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಅದಕ್ಕೆ ಇಡೀ ಸದನದ ಕೂಡ ಸಹಮತಿ ಇದೆ. ಅವರ ಆತ್ಮಕ್ಕೆ ಶಾಂತಿಯನ್ನು ಬಯಸುವುದರ ಜೊತೆಗೆ ನಾವು ಮಾಡುವಂತಹ ಈ ಸಂತಾಪ ಸೂಚನೆಯು ತಮ್ಮ ಮುಖಾಂತರ ಇಡೀ ಮಠಕ್ಕೆ ಸಂಸ್ಥಾನಕ್ಕೆ ಸೇರುವಂಥದ್ದು ಆಗಬೇಕು. ಅವರು ಕನಸಾಗಿರುವಂತಹ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ಅದು ನನಸಾಗುವಂತಹ ರೀತಿಯಲ್ಲಿ ನಾವು ಮಾಡುವುದು ನಮ್ಮ ಕರ್ತವ್ಯವೆಂದು ನಾವು ಭಾವಿಸಿಕೊಂಡಿದ್ದೇನೆ.

ಡಾ॥ ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಮಾನ್ಯ ಅಧ್ಯಕ್ಷರೆ, ಕಾಗಿನೆಲೆ ಮಹಾಸಂಸ್ಥಾನದ ಪೀಠಾಧಿಪತಿಗಳಾದಂತಹ ಶ್ರೀ ಶ್ರೀ ಶ್ರೀ ಬೀರೇಂದ್ರ ಕೇಶವ ತಾರಕಾನಂದಮರಿಯವರ ನಿಧನ ನಾಡಿಗೆ ದೊಡ್ಡ ನಷ್ಟವಾಗಿದೆ. ಆಧ್ಯಾತ್ಮಿಕ ಪ್ರಪಂಚಕ್ಕೆ ಅವರು ಸ್ವಾಮೀಜಿಗಳಾಗಿ ಆಶ್ರಮಸ್ವೀಕಾರ ಮಾಡಿದ ನಂತರ ಕಳೆದ ಸುಮಾರು 14 ವರ್ಷಗಳಲ್ಲಿ ಅವರು ದೊಡ್ಡ ಸೇವೆಯನ್ನು ಸಲ್ಲಿಸಿದ್ದಾರೆ. ತತ್ವಶಾಸ್ತ್ರದ ಸ್ನಾತಕೋತ್ತರ ಪದವಿ ಮಾತ್ರವಲ್ಲ ವೇದಾಂತ ಮತ್ತು ಸಂಸ್ಕೃತದ ಅಧ್ಯಯನವನ್ನು ಕೂಡ ಮಾಡಿದವರಾಗಿರುತ್ತಾರೆ. ನಮ್ಮ ಉಡುಪಿ ಕ್ಷೇತ್ರಕ್ಕೂ ಹಾಗೂ ಕನಕದಾಸರಿಗೂ ಬಹಳ ಹತ್ತಿರದ ಸಂಬಂಧವಿರುವುದರಿಂದ ಮೇಲೆಮೇಲೆ ಅವರು ನಮ್ಮ ಕ್ಷೇತ್ರಕ್ಕೆ ಬರುತ್ತಿದ್ದರು. ಮತ್ತು ಅಲ್ಲಿ ಈಗಾಗಲೇ ನಡೆಯುತ್ತಿದ್ದಂತಹ ಕನಕದಾಸರ ಉತ್ಸವ, ಕನಕದಾಸರ ಜಯಂತಿ ಅದನ್ನು ಬಹಳ ವಿಜೃಂಭಣೆಯಿಂದ ಮಾಡುವಂತಹದಕ್ಕೆ ಅಲ್ಲಿಯೇ ನಮ್ಮೆಲ್ಲರನ್ನು ಕರೆಸಿ ಆ ಬಗ್ಗೆ ಅವರು ಬಹಳ ಕಳಕಳಿಯನ್ನು ಹೊಂದಿದ್ದರು. ಕನಕದಾಸರ ಏನು ತತ್ವವಿದೆ, ಜ್ಞಾನ, ಯತಾರ್ಥ ಜ್ಞಾನ ಭಕ್ತಿ ಅನನ್ಯ ಭಕ್ತಿ, ಮತ್ತು ವೈರಾಗ್ಯದ ಬಗ್ಗೆ ಅವರು ಅಲ್ಲಿಗೆ ಬಂದಂತಹ ಸಂದರ್ಭದಲ್ಲಿ ಮಾಡಿರುವಂತಹ ಭಾಷಣ ಮತ್ತು ಕನಕಮಂಟಪ ರಚನೆಯಾಗುವಂತಹ ಸಂದರ್ಭದಲ್ಲಿ ಅವರು ಬಂದು ಆರ್ಶೀವದಿಸುವಂತಹದ್ದು ನಮಗೆ ಇವತ್ತು ಸ್ಮರಣೆಯ

ನೆನಪು ಇದೆ. ಅವರು ಈ ಪ್ರಾಧಿಕಾರದ ನೆಲೆಯಲ್ಲಿ ಕನಕ ಜನ್ಮ ಸ್ಥಾನವಾದಂತಹ ಈ ಕಾಗಿನೆಲೆಯಲ್ಲಿ ಉತ್ಸವವನ್ನು ಆಚರಿಸುವಂತಹ ಸಂದರ್ಭದಲ್ಲಿ ಇಲ್ಲಿಂದ ಅಲ್ಲಿಗೆ ಹೋಗಬೇಕು ಜನರು, ಅಲ್ಲಿಂದ ಉಡುಪಿಗೆ ಕನಕದಾಸರ ಉತ್ಸವವಾಗುವಾಗ ಬರಬೇಕು ಜನರು ಎಂದು ಹೇಳಿದ್ದರು, ಅದರ ಬಗ್ಗೆ ಸ್ಮರಣೆ ಇದೆ, ಆ ದೃಷ್ಟಿಯಿಂದ ನಾಡಿನಾದ್ಯಂತ ಇತ್ತೀಚಿನ ಒಂದು ಎರಡೂವರೆ ವರ್ಷದಿಂದ ಗಂಟು ನೋವು ಇದ್ದುದ್ದರಿಂದ ಅವರಿಗೆ ಅಷ್ಟು ಓಡಾಡುವುದಕ್ಕೆ ಆಗುತ್ತಿರಲಿಲ್ಲ. ಅದಕ್ಕಿಂತ ಮುಂಚೆ ಅವರು ಸಾಕಷ್ಟು ಸಂಚಾರವನ್ನು ಮಾಡಿ ಎಲ್ಲರನ್ನು ಸಂಪರ್ಕಿಸಿ ಆಧ್ಯಾತ್ಮಿಕ ಸ್ವಾಸ್ಥ್ಯದ ಬಗ್ಗೆ ಉತ್ತಮವಾದಂತಹ ವಿಚಾರವನ್ನು ಎಲ್ಲಾ ಕಡೆಗಳಲ್ಲೂ ಹೇಳಿದ್ದಾರೆ. ಅವರ ನಿಧನದಿಂದ ನಾಡಿಗೆ ದೊಡ್ಡ ನಷ್ಟವಾಗಿದೆ. ಅವರ ಹತ್ತಿರವಿದ್ದಂತಹ ಸಂದರ್ಭದಲ್ಲಿ ಒಂದು ಕನಕದಾಸರ ಕೃತಿಯ ಬಗ್ಗೆ ನಾನು ತಿಳಿಸಿದ್ದೇನೆ. ನಮ್ಮೆಲ್ಲಾ ಶಾಸಕರನ್ನು ಆ ಒಂದು ಸಮಾರಂಭಕ್ಕೆ ಕರೆದಿದ್ದರು. ಸಚಿವರೂ ಕೂಡ ಬಂದಿದ್ದರೂ. ನಿಮ್ಮಿಂದ ತುಂಬಾ ಸೇವೆ ಆಗಬೇಕೆಂದು ನಮಗೆ ಹೇಳಿದಾಗ ಇದು ದೇವರ ಅನುಗ್ರಹ ಮತ್ತು ಕನಕದಾಸರ ಒಂದು ಪದ್ಯದಲ್ಲಿಯೂ ಬಹುತೇಕ ಪದ್ಯದಲ್ಲಿ ಕನಕದಾಸರು ಜ್ಞಾನ ಮತ್ತು ಕರ್ಮ ಇದರ ಬಗ್ಗೆಯೇ ಹೆಚ್ಚು ಬರೆದಿದ್ದಾರೆ. ಒಂದು ಪದ್ಯ ಮಾತ್ರ ಅವರ ಒಂದು ಪದ್ಯದ ರಚನೆ ಅದು ವಿಧಿಯ ಬಗ್ಗೆ ಬರೆದಿದ್ದಾರೆ. ದೇವರ ದಯೆಯಿಂದ ಇದರಿಂದಲೇ ಆಗುತ್ತದೆ ಎನ್ನುವುದಕ್ಕೆ ಆ ಒಂದು ರಚನೆಯನ್ನು ಅವರ ಮುಂದೆ ಮತ್ತೊಮ್ಮೆ ನಮ್ಮನ್ನು ಉದ್ದೇಶಿಸಿ ಬೆರಳು ತೋರಿಸಿ ಹೀಗೆ ನಾಡಿನ ನೇತಾರರು ಎಂದು ಹೇಳಿದಂತಹ ಸಂದರ್ಭದಲ್ಲಿ ಅವರು ಒಂದು ಪದ್ಯವನ್ನು ಹೇಳಿದೆ.

> " ಕಷ್ಟಪಟ್ಟರು ಇಲ್ಲ, ಕಳವಳಿಸಿದರೂ ಇಲ್ಲ, ದೃಷ್ಟ ಮಾನವ ನಿನ್ನ ಹಣೆಯಲ್ಲಿ ಬರೆದುದಲ್ಲದೆ, ಕಟ್ಟಾಳು, ಕಡುಜಾಣನಾಗಿ ಪುಟ್ಟಿದರೂ ಇಲ್ಲ, ಕಟ್ಟಾಳು ಎಂದರೆ ಬೈ ಬರ್ತ್ ಸ್ಟ್ರಾಂಗ್ ಬಾಡಿ ಇರುತ್ತದೆಯಲ್ಲಾ ಕಡುಜಾಣ ಬೈ ಬರ್ಥ ಇಂಟಲಿಜೆಂಟ್ ಎಂದಾದರೂ ಇಲ್ಲ ಬೆಟ್ಟವನ್ನೇ ಕಿತ್ತು ತಂದಿಟ್ಟರಿಲ್ಲ, ಸೃಷ್ಟೀಶ ಕಾಗಿನೆಲೆ ಅದಿಕೇಶವರಾಯ, ಕೊಟ್ಟವರಿಗುಂಟು, ಕೊಡದಿದ್ದವರಿಗಿಲ್ಲ ಅವನ ಕೃಪೆಯಿಂದ ಆಗಿದೆ, ಯೋ ಅದು ರಾಜ್ಯಕ್ಕೆ ಸಲ್ಲಬೇಕೆನ್ನುವಂತಹ ಮಾತನ್ನು ಹೇಳುವಾಗ

ಕನಕದಾಸರು ಬರೆದಂತಹ ರಚನೆ ಅವರ ಮುಂದೆಯೇ ನಾನು ಹೇಳುವಾಗ ಅವರು ಬಹಳ ಸಂತೋಷವನ್ನು ಪಟ್ಟರು. ಇವತ್ತು ಅಂತಹ ಒಬ್ಬ ಶ್ರೇಷ್ಠ ಆತ್ಮ ಇವತ್ತು

ನಮ್ಮೊಡನೆ ಇಲ್ಲ, ಅವರ ಆತ್ಮಕ್ಕೆ ಪರಮಾತ್ಮ ಸದ್ಗತಿಯನ್ನು ಕೊಡಲಿ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) : ಮಾನ್ಯ ಅಧ್ಯಕ್ಷರೇ, ಈ ದಿನ ಕಾಗಿನೆಲೆ ಮಹಾಸಂಸ್ಥಾನದ ಪೀಠಾಧ್ಯಕ್ಷರಾದಂತಹ ಬೀರೇಂದ್ರ ಕೇಶವ ತಾರಕಾನಂದಪುರಿ ಸ್ವಾಮಿಗಳು ದೈವಾಧೀನರಾಗಿದ್ದಾರೆ. ಅವರು ತತ್ವಜ್ಞಾನಿಗಳು, ಡಾ॥ ಸರ್ವಪಲ್ಲಿ ರಾಧಾಕೃಷ್ಣರವರ ಶಿಷ್ಯರಾಗಿ ನಾನಿದ್ದೆ ಎಂಬ ವಿಷಯವನ್ನು ಅವರ ಜೀವನದ ಕಾಲದಲ್ಲಿ ಹೇಳುತ್ತಿದ್ದರು. ಅವರ ಸಂಸ್ಕಾರ ನಾನು ಅಳವಡಿಸಿಕೊಂಡಿರುವುದರಿಂದ ನಾನು ಕೆಲವೊಂದು ಅವರ ಶಿಷ್ಯಾಚಾರವನ್ನು ಅಳವಡಿಸಿಕೊಂಡಿರುವುದರಿಂದ ಸಮಾಜದಲ್ಲಿ ಉತ್ತಮ ವ್ಯಕ್ತಿಯಾಗುವುದಕ್ಕೆ ಸಾಧ್ಯವಾಯಿತು ಎಂಬ ವಿಚಾರವನ್ನೂ ಕೂಡ ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಅವರ ಪೂರ್ವಾಶ್ರಮದ ಬಗ್ಗೆ ಮಾನ್ಯ ಎಂಪಿ ಪ್ರಕಾಶ್‌ರವರು ಹೇಳಿದಹಾಗೆ ಅವರೂ ಕೂಡ ಚುನಾವಣೆಯಲ್ಲಿ ಪರಾಜಿತಗೊಂಡಿದ್ದರು. ನಮ್ಮ ಸಮಾಜದ ಮುಖಂಡರು ಅವರ ಪೂರ್ವಾಶ್ರಮಕ್ಕೆ ಮುಂಚೆ ಸಮಾಜದಲ್ಲಿ ತಾವು ಕಾಗಿನೆಲೆ ಮಹಾಸಂಸ್ಥಾನ ಅವರ ಒಂದು ಪ್ರಶ್ನೆಯನ್ನು ಪ್ರಸ್ತಾಪ ಮಾಡಿದರು ಏತಕ್ಕೋಸ್ಕರ ಅದನ್ನು ಕಾಗಿನೆಲೆಯಲ್ಲಿಯೇ ಮಾಡಬೇಕೆಂದು ಎಂದು? ಕನಕದಾಸರು ಯುದ್ದವನ್ನು ಮಾಡಿ ಬಾಡಾದಿಂದ ಕಾಗಿನೆಲೆಗೆ ಬಂದು ಅಲ್ಲಿಂದ ಉಡುಪಿಗೆ ಹೋದರು. ಕಾಗಿನೆಲೆಯಲ್ಲಿ ರಂಗನಾಥನ ಭಕ್ತನಾಗಿದ್ದರು ಎನ್ನುವ ದೃಷ್ಟಿಯಿಂದ ಆ ಸ್ಥಾನದಿಂದ ಅವರು ಆಯ್ಕೆ ಮಾಡಿದರು. ಅದು ಕಾಗಿನೆಲೆ ಪೀಠ ಆಗಲಿಕ್ಕೆ ಅವರು ಕಾರಣೀಭೂತರು ಎಂದರೆ ತಪ್ಪಾಗಲಿಕ್ಕಿಲ್ಲ. ಅವರು 1992ರಲ್ಲಿ ಈ ರಾಜ್ಯದಲ್ಲಿ ಮೂರನೇ ಬಹು ದೊಡ್ಡ ಸಮಾಜದ ಜಗದ್ಗುರುಗಳಾದ ಮೇಲೆ **ಕರ್ಮ ಮತ್ತು ಧರ್ಮದ ಬಗ್ಗೆ ಇರುವ ಸಂಬಂಧವನ್ನು** ಅವರ ಭಾಷಣದಲ್ಲಿ ಹೇಳುತ್ತಿದ್ದರು. "ಧರ್ಮ ಯಾವುದೇ ಒಬ್ಬ ವ್ಯಕ್ತಿಯ ಸ್ವತ್ತಾಗಬಾರದು. ಧರ್ಮ ಎಲ್ಲರ ಸ್ವತ್ತಾಗಬೇಕು. ಎಲ್ಲಾ ಧರ್ಮವನ್ನು ಆಚರಣೆ ಮಾಡಬೇಕು. ಧರ್ಮವನ್ನು ಆಚರಿಸುವುದರಿಂದ ಸಮಾಜದಲ್ಲಿ ಅವನು ಒಳ್ಳೆಯ ವ್ಯಕ್ತಿಯಾಗಿ ರೂಪುಗೊಳ್ಳಲಿಕ್ಕೆ ಸಾಧ್ಯತೆ ಇದೆ" ಎಂಬ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದರು. ಎರಡನೆಯದಾಗಿ ಸಮಾಜದಲ್ಲಿ ಸಮಾನತೆಯನ್ನು ತರಬೇಕು, ಬಸವಣ್ಣನವರ ವಚನಗಳನ್ನು ಆಗಿಂದಾಗ್ಗೆ ಅವರು ಭಾಷಣದಲ್ಲಿ ಪ್ರಸ್ತಾಪಿಸುತ್ತಿದ್ದರು. ಬಸವಣ್ಣನವರು ಒಬ್ಬ ಸಮತಾವಾದಿ, ಆ ಸಮತಾವಾದವನ್ನು ಇವತ್ತು ಎಲ್ಲಾ ಧರ್ಮದ ಜಗದ್ಗುರುಗಳೂ ಸಹ ಅನುಷ್ಠಾನಕ್ಕೆ ತಂದ ಪಕ್ಷದಲ್ಲಿ ಈ ದೇಶ ಒಂದು ಜಾತ್ಯಾತೀತ ರಾಷ್ಟ್ರವಾಗಬಹುದೆನ್ನುವ ವಿಚಾರವನ್ನು ಅವರು ಪ್ರಸ್ತಾಪ ಮಾಡುತ್ತಿದ್ದರು. ಇವತ್ತು ಅವರು ನಮ್ಮನ್ನು ಅಗಲಿದ್ದಾರೆ. ನಾನು ಈ

ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸಬೇಕಾಗುತ್ತದೆ, ಏಕೆಂದರೆ, ಈ ಕನಕ ಗುರುಪೀಠದ ಅಭಿವೃದ್ಧಿಗೆ ಸರ್ಕಾರದಲ್ಲಿ ಮೂರು ಕೋಟಿ ರೂಪಾಯಿಗಳನ್ನು ಅನುದಾನವಾಗಿಟ್ಟಿದ್ದಾರೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳೂ, ಉಪಮುಖ್ಯಮಂತ್ರಿಗಳು ಇನ್ನೂ ಹೆಚ್ಚು ಅನುದಾನವನ್ನು ಕೊಡುವುದರ ಮೂಲಕ ಅವರ ಕನಸನ್ನು ನನಸಾಗಿಸಬೇಕು, ಅದನ್ನು ಮುಖ್ಯಮಂತ್ರಿಗಳು ಮಾಡುತ್ತಾರೆಂಬ ನಂಬಿಕೆ ನನಗಿದೆ. ಇವತ್ತು ಕಾಗಿನೆಲೆ ಮಹಾಸ್ವಾಮಿಗಳ ನಿಧನದ ವಿಚಾರವನ್ನು ಈ ಕರ್ನಾಟಕದ ಜನಪ್ರತಿನಿಧಿಗಳ ವೇದಿಕೆಯಲ್ಲಿ ತಂದಿದ್ದಕ್ಕೆ ತಮ್ಮನ್ನು ಅಭಿನಂದಿಸಿ ಅವರ ಬಗ್ಗೆ ಒಳ್ಳೆಯ ಮಾತನಾಡಿದ್ದಕ್ಕೆ ಮಾನ್ಯ ಮುಖ್ಯಮಂತ್ರಿಗಳನ್ನು, ಎಂ.ಪಿ. ಪ್ರಕಾಶ್ ಹಾಗೂ ವಿ.ಎಸ್. ಆಚಾರ್ಯರವರನ್ನು ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಓಲೆಕಾರ್ ನೆಹರು ಚನ್ನಬಸಪ್ಪ (ಬ್ಯಾಡಗಿ) : ಅಧ್ಯಕ್ಷರೇ, ಕನಕ ಗುರುಪೀಠದ ಪೀಠಾಧ್ಯಕ್ಷರಾದಂಥ ಪರಮ ಪೂಜ್ಯ ಬೀರೇಂದ್ರ ಕೇಶವ ತಾರಕಾನಂದ ಮಹಾಸ್ವಾಮಿಗಳು ಇವತ್ತು ಇಹಲೋಕವನ್ನು ತೊರೆದಿರುವ ವಿಚಾರ ಕರ್ನಾಟಕ ರಾಜ್ಯದ ಸಂಪೂರ್ಣ ಜನತೆಗೆ ತುಂಬಲಾರದ ಹಾನಿಯುಂಟಾಗಿದೆಯೆಂದು ನಾನು ಭಾವಿಸುತ್ತೇನೆ. ಕನಕ ಗುರುಪೀಠ ಪೀಠಾಧ್ಯಕ್ಷರಾದ ತಾರಕಾನಂದ ಸ್ವಾಮೀಜಿಯವರು ನನ್ನ ಕ್ಷೇತ್ರದ ಕಾಗಿನೆಲೆಯಲ್ಲಿ ಬರುವಂಥ ಒಂದು ಸಣ್ಣ ಹಳ್ಳಿ. ಈ ಸಣ್ಣ ಹಳ್ಳಿಯಲ್ಲಿ ಇವತ್ತು ಗುರುಪೀಠವನ್ನು ಸ್ಥಾಪನೆ ಮಾಡಿ ಮೊದಲನೆಯ ಜಗದ್ಗುರುಗಳಾಗಿ ಕೆಲಸವನ್ನು ನಿರ್ವಹಿಸಿ, ಆ ಭಾಗದ ಜನತೆಯಲ್ಲಿ ಸಾಮಾಜಿಕ ಕಳಕಳಿಯನ್ನು, ಚಿಂತನೆಯನ್ನು ತುಂಬುವಂಥ ಕೆಲಸವನ್ನು ಮಾಡಿದಂಥ ಮಹಾನುಭಾವರು ಎಂದು ಹೇಳಿದರೆ ತಪ್ಪಾಗಲಾರದು. ಅಂಥ ಮಹಾನುಭಾವರು ಇವತ್ತಿನ ದಿವಸ ನಮ್ಮನ್ನು ಅಗಲಿದ್ದಾರೆ, ಅಂಥ ಮಹಾನುಭಾವರ ಅಗಲಿಕೆಯಿಂದ ವಿಶೇಷವಾಗಿ ನನ್ನ ಕ್ಷೇತ್ರಕ್ಕೆ ಹೆಚ್ಚಿನ ಒಂದು ಹಾನಿಯಾಗಿದೆ ಎಂದು ಹೇಳಿದರೆ ತಪ್ಪಾಗಲಾರದು ಎಂದು ನಾನು ಭಾವಿಸುತ್ತೇನೆ. ಪೂಜ್ಯರು ಎಲ್ಲಾ ಧರ್ಮಗಳ ಜೊತೆಗೆ ನಿಕಟವಾದಂಥ ಸಂಪರ್ಕವನ್ನು ಹೊಂದಿದ್ದರು, ಇವತ್ತು ಕಾಗಿನೆಲೆಯಲ್ಲಿ ಕುರುಬ ಜನಾಂಗ ಬಹಳ ಕಡಿಮೆಯಿದೆ, ಅಲ್ಲಿ ಶೇ.90 ಭಾಗ ಮುಸಲ್ಮಾನ್ ಜನರಿದ್ದಾರೆ. ಆ ಮುಸಲ್ಮಾನ್ ಸಮಾಜದವರನ್ನೇ ಹಿಡಿದುಕೊಂಡು ಅಲ್ಲಿ ಆ ಪೀಠಾಧ್ಯಕ್ಷ ಸ್ಥಾನದ ಗೌರವವನ್ನು ಕಾಪಾಡಿಕೊಂಡು ಬಂದಂಥ ಗೌರವಸ್ಥರು, ಅಂತಹ ಮಹಾನುಭಾವರು ಇವತ್ತಿನ ದಿವಸ ನಮ್ಮೆಲ್ಲರನ್ನು ಅಗಲಿದ್ದಾರೆ, ಈ ಸಂದರ್ಭದಲ್ಲಿ ತಾವುಗಳು ಸಂತಾಪ ಸೂಚನೆಯನ್ನು ಈ ಸಭೆಯಲ್ಲಿ ಮಂಡಿಸಿದ್ದೀರಿ. ಇದಕ್ಕೆ ನಾನೂ ಸಹ ನನ್ನ ಸಹಮತವನ್ನು ಸೂಚಿಸುತ್ತಾ ಪೂಜ್ಯರ

ಆತ್ಮಕ್ಕೆ ಚಿರಶಾಂತಿಯು ಸಿಗಲಿ ಎಂದು ಹೇಳಿ ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಅನ್ನದಾನಿ (ಮಳವಳ್ಳಿ) : ಮಾನ್ಯ ಅಧ್ಯಕ್ಷರೇ, ಇವತ್ತು ಶ್ರೀ ಬೀರೇಂದ್ರ ಕೇಶವ ತಾರಕಾನಂದಪುರಿ ಸ್ವಾಮೀಜಿಯವರು ಇಹಲೋಕವನ್ನು ತ್ಯಜಿಸಿ ಈ ಸಮಾಜಕ್ಕೆ ಒಮದು ದೊಡ್ಡ ಆಘಾತವನ್ನು ಉಂಟುಮಾಡಿದ್ದಾರೆ. ಮತ್ತೆ ಅವರ ಆತ್ಮಕ್ಕೆ ಶಾಂತಿಯನ್ನು ಈ ಸದನದ ಮೂಲಕ ನಾನು ಕೋರುತ್ತಾ, ಸ್ವಾಮೀಜಿಯವರು ಆ ವರ್ಗದ ಜನರನ್ನು, ಆ ವರ್ಗದಲ್ಲಿ ಮೌಢ್ಯತೆಯಿಂದ ತುಂಬಿ ಹೋಗಿದ್ದಂಥ ಆ ವರ್ಗವನ್ನು ಮೇಲೆತ್ತಲಿಕ್ಕೆ ಬಹಳಷ್ಟು ಪ್ರಯತ್ನಗಳನ್ನು ಮಾಡಿರತಕ್ಕಂಥ ಸ್ವಾಮೀಜಿಯವರನ್ನು ಇಂದು ನಾವು ಕಳೆದುಕೊಂಡಿದ್ದೇವೆ. ಸ್ವಾಮೀಜಿಯವರು ಈ ವರ್ಗಕ್ಕೆ ಉನ್ನತ ಶಿಕ್ಷಣವನ್ನು ಕೊಡಿಸಿ, ಈ ಸಮಾಜದ ಮುಖ್ಯವಾಹಿನಿಯಲ್ಲಿ ತೆಗೆದುಕೊಂಡು ಬರಬೇಕೆಂದು ಹೇಳಿ, ವೈದ್ಯಕೀಯ ಹಾಗೂ ಇಂಜಿನಿಯರಿಂಗ್ ಕಾಲೇಜುಗಳನ್ನು ತೆಗೆದುಕೊಂಡು ಬರಬೇಕೆಂದು ಹೇಳಿ ಆ ಸಮಾಜವನ್ನು ಇತರೆ ಸಮಾಜದ ಜೊತೆಗೆ ತರಬೇಕೆನ್ನತಕ್ಕಂಥ ಬಹಳಷ್ಟು ಪ್ರಯತ್ನಗಳನ್ನು ಮಾಡಿದಂಥ ಸ್ವಾಮಿಜಿಯವರ ಬಹಳಷ್ಟು ಆಸೆಗಳು ಇನ್ನೂ ಕೈಗೂಡದೇ ಉಳಿದಿದ್ದವು, ಅಷ್ಟರಲ್ಲೇ ಅವರು ವಿಧಿವಶರಾದುದು ನಿಜವಾಗಲೂ ನಮ್ಮೆಲ್ಲರಿಗೂ ನೋವನ್ನು ತಂದಿದೆ. ಕನಕದಾಸರು ಅವರ ದಾಸ ಸಾಹಿತ್ಯದಲ್ಲಿ **"ಕುಲ, ಕುಲ ಕುಲವೆಂದು ಹೊಡೆದಾಡಿದಿರಿ, ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ, ಬಲ್ಲಿರಾ"** ಎಂದು ಹೇಳಿದ್ದಾರೆ. ಅವರ ಪ್ರಕಾರ ಈ ಸಮಾಜ ಜಾತಿ, ಅಂತಸ್ತು, ವರ್ಗ ಎನ್ನತಕ್ಕಂಥ ಈ ಭೇದದಿಂದ ಮೇಲೆ ತರಬೇಕೆನ್ನುವ, ಸಮಾನತೆಗೆ ತರಬೇಕೆನ್ನುವ ಕನಕದಾಸರ ಉಕ್ತಿಯೇನಿತ್ತು, ಅದನ್ನು ನಾವು ಆ ಬದುಕನ್ನು, ಕನಕದಾಸರ ಕನಸನ್ನು ನನಸು ಮಾಡಬೇಕೆನ್ನತಕ್ಕಂಥ ನಿಟ್ಟಿನಲ್ಲಿ ಈ ಸಮಾಜವನ್ನು ಸಮಾನತೆಯ ಹಂತದಲ್ಲಿ ತರಲಿಕ್ಕೆ ಪ್ರಯತ್ನಿಸಿದ ಸ್ವಾಮೀಜಿಯವರು ಅಕಾಲಿಕವಾಗಿ ನಮ್ಮನ್ನು ಬಿಟ್ಟುಹೋಗಿದ್ದಾರೆ, ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ಅದೇರೀತಿ ಈ ವರ್ಗದ ಜೀವನವನ್ನು ಒಳ್ಳೆಯ ರೀತಿಯಲ್ಲಿ ತೆಗೆದುಕೊಂಡು ಹೋಗತಕ್ಕಂಥ ಪ್ರಯತ್ನವನ್ನು ಈಗಿರತಕ್ಕಂಥ ನಮ್ಮ ಜನ, ಸಮಾಜವೆಲ್ಲಾ ಮಾಡಲಿ ಎಂದು ಹೇಳಿ, ಸರ್ಕಾರ ಹೆಚ್ಚಿನ ಅನುದಾನವನ್ನು ಕೊಟ್ಟು, ಕಾಗಿನೆಲೆಯನ್ನು ಒಂದು ದೊಡ್ಡ ಕ್ಷೇತ್ರವನ್ನಾಗಿ ಮಾಡಬೇಕೆನ್ನುವ ಅವರ ಆಸೆಯನ್ನು ನೆರವೇರಿಸಬೇಕೆಂದು ನಾನು ಒತ್ತಾಯ ಮಾಡುತ್ತಾ, ನೀವು ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟದ್ದಕ್ಕಾಗಿ ನಿಮಗೆ ಧನ್ಯವಾದಗಳನ್ನು ಹೇಳುತ್ತೇನೆ. ನಮಸ್ಕಾರ.

ಅಧ್ಯಕ್ಷರು : ಈಗ ಮೃತರ ಗೌರವಾರ್ಥ ಸದನದಲ್ಲಿ ಮಾನ್ಯ ಸದಸ್ಯರೆಲ್ಲಾ ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಈ ಹಂತದಲ್ಲಿ ಸದನದ ಮಾನ್ಯ ಸದಸ್ಯರುಗಳು ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನು ಆಚರಿಸಿದರು.)

3. ನಿಯಮ 69ರ ಮೇರೆಗೆ ನಡೆದ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ.

ವಿಷಯ: ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಯ ಬಗ್ಗೆ. (ಮುಂದುವರಿದ ಚರ್ಚೆ)

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೇ, ಈಗ ಮುಂದುವರೆದ ಮೈತ್ರೇಯಿ ಸರ್ಕಾರಗಳ ಅಂದರೆ ಕರ್ನಾಟಕ ರಾಜ್ಯದಲ್ಲಿ ಕೊಯಲಿಷನ್ ಗವರ್ನಮೆಂಟ್‌ಗಳ ಎರಾ ಪ್ರಾರಂಭವಾಯಿತು; ಮೊದಲನೇ ಬಾರಿಗೆ ಹಿಂದೆ ಒಂದು ಸಲ ಒಂದು ಸಣ್ಣಮಟ್ಟದಲ್ಲಿ ಆಗಿತ್ತು; ಆದರೆ ಇಲ್ಲಿಯವರೆಗೆ ತಂದಂಥ ಏನು ಘಟನೆಗಳಿವೆ, ಈ ಘಟನೆಗಳ ನಂತರ, ಈ ವಿರಾಮದ ನಂತರ ಹೊಸ ಸರ್ಕಾರಗಳ ವಿಷಯಗಳೇನಿವೆ, ಬೆಳಿಗ್ಗೆ ಸನ್ಮಾನ್ಯ ಹಿರಿಯ ಸದಸ್ಯರಾದಂಥ ಶ್ರೀ ಮಲ್ಲಿಕಾರ್ಜುನ್ ಖರ್ಗೆಯವರು ಕೆಲವು ವಿಷಯಗಳನ್ನು ಪ್ರಸ್ತಾಪಿಸಿದರು, ಸನ್ಮಾನ್ಯ ಹಿರಿಯ ಸದಸ್ಯರು ಹಾಗೂ ವಿರೋಧ ಪಕ್ಷದ ನಾಯಕರಾಗಿರುವಂಥ ಶ್ರೀ ಧರಂಸಿಂಗ್‌ರವರು ಮುಖ್ಯಮಂತ್ರಿಗಳಾದರು.

ಹೊಸ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದಾಗ, ನೀವೂ ಅವರ ಜೊತೆ ಮೈತ್ರಿ ಸರ್ಕಾರದಲ್ಲಿದ್ದಿರಿ. ಏತಕ್ಕೆ ಈ ವಿಷಯದಲ್ಲಿ ಅಂತಿಮದಲ್ಲಿ ಅಂತಿಮವಾದ ನಿರ್ಣಯವನ್ನು ತೆಗೆದುಕೊಳ್ಳಲಿಕ್ಕಾಗಲಿಲ್ಲ. ಈ ವಿಷಯಗಳನ್ನು ಏನು ಪ್ರಸ್ತಾಪ ಮಾಡಿದರು, ಆ ವಿಷಯಕ್ಕೆ ನಾನು ಈಗ ಬರುತ್ತೇನೆ. ಕಳೆದ ಚುನಾವಣೆಯ ಸಂದರ್ಭದಲ್ಲಿ ಈ ವಿಷಯದ ಬಗ್ಗೆ ನಮ್ಮ ಪಕ್ಷ ಮತದಾರರ ಮುಂದೆ ಈ ಕೆಲವು ಭೂಹಗರಣಗಳ ಬಗ್ಗೆ ಚರ್ಚೆಯನ್ನು ಇಟ್ಟಿದ್ದೇವು, ಆ ಸಂದರ್ಭದಲ್ಲಿ ನಮ್ಮ ಪಕ್ಷದ ನಾಯಕರುಗಳು ಹಲವಾರು ರೀತಿಯ ಮಾತುಗಳನ್ನಾಡಿದ್ದಾರೆ. ಅವುಗಳನ್ನು ನೆನಪಿಸಿಕೊಳ್ಳುವುದಕ್ಕೆ ಬಯಸುತ್ತೇನೆ. ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ, ಈ ಭೂ ಹಗರಣಕ್ಕೆ ಸಂಬಂಧಪಟ್ಟವರನ್ನು ಜೈಲಿಗೆ ಕಳುಹಿಸುತ್ತೇವೆಂಬ ಮಾತನ್ನು ಏನು ಸಾರ್ವಜನಿಕವಾಗಿ ಮಾತನಾಡಿದ್ದಾರೆ, ಹಾಗೆ ಜೈಲಿಗೆ ಕಳುಹಿಸುತ್ತೇವೆಂದು